**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ: 732 / 2020**

ಫಿರ್ಯಾದಿ : ಸರ್ಕಾರದ ಪರವಾಗಿ ಆರಕ್ಷಕ ಉಪ–ನಿರೀಕ್ಷಕರು,
ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

ವಿರುದ್ಧ

ಆರೋಪಿ : ಶ್ರೀ ಹರೀಶ

:: **ಆಪಾದನೆ** ::

**ಶ್ರೀ ಸತೀಶ. ಕೆ.ಜಿ. ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿಯಾದಃ–

ಶ್ರೀ ಹರೀಶ ಬಿನ್ ದೇವರಾಜೇಗೌಡ,
ವಯಸ್ಸು ಸುಮಾರು 36 ವರ್ಷ,
ಕೆ.ಎಸ್.ಆರ್.ಟಿ.ಸಿ., ಬಸ್ ಚಾಲಕ,
ವಾಸಃ ಚಿಕ್ಕನಾಯಕನಹಳ್ಳಿ ಗ್ರಾಮ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

ಈ ಮೇಲ್ಕಂಡ ನಿವಾಸಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ–

ದಿನಾಂಕ 09.10.2019 ರಂದು ಬೆಳಿಗ್ಗೆ 06.45 ಗಂಟೆ ಸಮಯದಲ್ಲಿ ಹುಲ್ಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಗೌಡರಹುಂಡಿ–ರಾಂಪುರ ಮುಖ್ಯ ಟಾರ್ ರಸ್ತೆಯ ರಾಂಪುರ ಗ್ರಾಮದ ಶ್ರೀಮತಿ ತಾಯಮ್ಮನವರ ಮನೆಯ ಎದುರು ಇರುವ ಗೌಡರಹುಂಡಿಗೆ ಹೋಗುವ ರಸ್ತೆ ತಿರುವಿನಲ್ಲಿ ಚಾಸಾ–1 ಶ್ರೀ ಮಹದೇವಸ್ವಾಮಿ ರವರು ತಮ್ಮ ಬಾಬ್ತು ಕೆಎ–09 ಹೆಚ್‌ಸಿ–8379 ಸಂಖ್ಯೆಯುಳ್ಳ ಹೀರೋ ಸ್ಪ್ಲೆಂಡರ್ ಬೈಕ್ ನ್ನು ಚಾಲನೆ ಮಾಡಿಕೊಂಡು ಬರುವಾಗ ಎದುರುಗಡೆಯಿಂದ ಅಂದರೆ ರಾಂಪುರ ಗ್ರಾಮದಿಂದ ಗೌಡರಹುಂಡಿ ಗ್ರಾಮದ ಕಡೆಗೆ ಆರೋಪಿಯಾದ ನೀವು ಕೆಎ–10 ಎಫ್–0204 ಸಂಖ್ಯೆಯುಳ್ಳ ಕೆ.ಎಸ್.ಆರ್.ಟಿ.ಸಿ., ಬಸ್ ನ್ನು ಅತಿವೇಗ, ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ಮಾನವ ಜೀವಕ್ಕೆ ಅಪಾಯ ಉಂಟು ಮಾಡುವ ರೀತಿಯಲ್ಲಿ ಚಾಲನೆ

ಮಾಡಿಕೊಂಡು ಬಂದು ಚಾಸಾ–1 ರವರ ಮೋಟಾರ್ ಬೈಕ್ ಗೆ ಡಿಕ್ಕಿ ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಕೆಎ–10 ಎಫ್–0204 ಸಂಖ್ಯೆಯುಳ್ಳ ಕೆ.ಎಸ್.ಆರ್.ಟಿ.ಸಿ., ಬಸ್ ನ್ನು ಅತಿವೇಗ, ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ಮಾನವ ಜೀವಕ್ಕೆ ಅಪಾಯ ಉಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಚಾಸಾ–1 ರವರ ಮೋಟಾರ್ ಬೈಕ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ–1 ರವರ ಬಲಗೈನ ಭುಜಕ್ಕೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಕೆಎ–10 ಎಫ್–0204 ಸಂಖ್ಯೆಯುಳ್ಳ ಕೆ.ಎಸ್.ಆರ್.ಟಿ.ಸಿ., ಬಸ್ ನ್ನು ಅತಿವೇಗ, ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ಮಾನವ ಜೀವಕ್ಕೆ ಅಪಾಯ ಉಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಚಾಸಾ–1 ರವರ ಮೋಟಾರ್ ಬೈಕ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ–1 ರವರ ಬಲಮಂಡಿಯ ಕೆಳಭಾಗ , ಬಲಮೊಣಕೈಗೆ , ಬಲದ ಕಣ್ಣಿನ ಪಕ್ಕ ಕೆನ್ನೆಯ ಹತ್ತಿರ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 337 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಕೆಎ–10 ಎಫ್–0204 ಸಂಖ್ಯೆಯುಳ್ಳ ಕೆ.ಎಸ್.ಆರ್.ಟಿ.ಸಿ., ಬಸ್ ನ್ನು ಅತಿವೇಗ, ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ಮಾನವ ಜೀವಕ್ಕೆ ಅಪಾಯ ಉಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಚಾಸಾ–1 ರವರ ಮೋಟಾರ್ ಬೈಕ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ–1 ರವರಿಗೆ ಡಿಕ್ಕಿ ಪಡಿಸಿದ ನಂತರ ಆರೋಪಿಯಾದ ನೀವು ಗಾಯಾಳುವಿಗೆ ಅಗತ್ಯ ವೈದ್ಯಕೀಯ ಚಿಕಿತ್ಸೆ ಕೊಡಿಸದೆ ಹಾಗು ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೆ ಅಪಘಾತದ ಸ್ಥಳದಿಂದ ಪರಾರಿಯಾಗಿದ್ದು , ಆ ಮೂಲಕ ಭಾರತೀಯ ಮೋಟಾರು ವಾಹನ ಕಾಯಿದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆ:1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

ಆರೋಪಿ ಉತ್ತರಃ

ಪ್ರಶ್ನೆ:2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

ಆರೋಪಿ ಉತ್ತರಃ

(ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ಆಪಾದನೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 06.11.2024.

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.